**–:ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ:–**

ವಾದಿಯರು, ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂದಕಾಜ್ಞೆ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ ದಾವಾ ವಿಚಾರಣೆ ಮುಗಿಯುವವರೆಗೆ 1 ನೇ ಪ್ರತಿವಾದಿ ಯಾ ಅವರ ಕಡೆಯವರು ದಾವಾ ಸ್ಥಳವನ್ನು ಪರಾಧೀನ ಮಾಡದಂತೆ, ಭೋಜಾ–ಒತ್ತೆ, ಅಡಮಾನ ಮಾಡದಂತೆ ಹಾಗೂ ದಾವಾ ಸ್ಥಳದಲ್ಲಿನ ಸಾಗುವಾನಿ ಮರಗಳನ್ನು ಕಡಿದು ಸಾಗಾಟ ಮಾಡದಂತೆ ಮತ್ತು ವಾದಿಯರ ಕಬ್ಜಾ ಬೋಗ್ವಟೆಗೆ ಆತಂಕಪಡಿಸದಂತೆ ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ವಾದವನ್ನು ಆಲಿಸಲಾಯಿತು. ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು. ವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ವಾದಿಯರು ಹೂಡಿದ ಈ ದಾವೆಯು ಮೇಲ್ನೋಟಕ್ಕೆ ಸಮ್ಮತವಾದ ದಾವೆಯಾಗಿದೆ ಎಂದು ಕಂಡುಬರುತ್ತದೆ. ಕಛೇರಿಯಲ್ಲಿ ಪರಿಶೀಲಿಸಲಾಯಿತು, ಯಾವುದೇ ಎಚ್ಚರಿಕೆ ಅರ್ಜಿ (ಕೆವಿಯಟ್) ಇರುವುದಿಲ್ಲ. ಆದ್ದರಿಂದ ಈ ಮುಂದಿನಂತೆ ಆದೇಶಿಸುತ್ತೇನೆ.

**ಆ ದೇ ಶ**

ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಭಾಗಶಃ ಪುರಸ್ಕರಿಸಲಾಗಿದೆ.

1 ನೇ ಪ್ರತಿವಾದಿ ಯಾ ಅವರ ಕಡೆಯವರು ದಾವಾ ಸ್ಥಳವನ್ನು ಪರಾಧೀನ ಮಾಡದಂತೆ, ಭೋಜಾ-ಒತ್ತೆ, ಅಡಮಾನ ಮಾಡದಂತೆ ಹಾಗೂ ದಾವಾ ಸ್ಥಳದಲ್ಲಿನ ಸಾಗುವಾನಿ ಮರಗಳನ್ನು ಕಡಿದು ಸಾಗಾಟ ಮಾಡದಂತೆ ಮತ್ತು ವಾದಿಯರ ಕಬ್ಜಾ ಬೋಗ್ವಟೆಗೆ ಆತಂಕಪಡಿಸದಂತೆ ಮುಂದಿನ ವಾಯಿದೆವರೆಗೆ ತಾತ್ಕಾಲಿಕವಾಗಿ ನಿರ್ಭಂಧಿಸಲಾಗಿದೆ.

ಪ್ರತಿವಾದಿಯರಿಗೆ ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪ್ರತಿ ಮತ್ತು ತುರ್ತು ನೋಟಿಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

ಪ್ರತಿವಾದಿಯರಿಗೆ ದಾವಾ ಸಮನ್ಸ್ ಹೊರಡಿಸಿರಿ.

ವಾದಿಯರು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 3(ಎ) ಮತ್ತು (ಬಿ) ನಿಯಮಗಳನ್ನು ಪರಿಪಾಲಿಸತಕ್ಕದ್ದು.

**ಮುಂದಿನ ವಿಚಾರಣೆ ದಿನಾಂಕ: 28.05.2024.**

SD/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾವರ.